ಕಣ್ ಮುಂದಿರೋ ಬದ್ಕಿರೋ ಬಸಪ್ಪಎತ್ತು ಸತ್ರ ತಿಂದು ಮೋಕ್ಷ ಕೊಡೋ ಮಂದಿ ನಾವು. ಸತ್ರ ಬಾರಿಸಾಕ ಬೇಕು, ಇದ್ರ ಉಚ್ಚೀಗುಂಡಿ, ಇವರ ಹೇಲ್ ಬಳಿಯಾಕ ಬೇಕು. ಎಷ್ಟಾದ್ರೂ ನಾವಾತೂ ನಂ ದೇವ್ರಾತೂ ಊರ ಹೊರಗಿನವರಲ್ಲನೂ' ಅಗಸ್ಯಾಗಿಂದ ಕೇರಿ ಮುಟ್ಟೋವರೆಗೂ ಇಂತಹ ತರಹೇವಾರಿ ಮಾತುಗಳು.

ಊರಲ್ಲಿನ ಎಲ್ಲ ಗುಡಿಗಳ ಲೆಕ್ಕ ಹಾಕಿದರೂ ಬೆರಳೆಣಿಕೆಯವು. ನಡುಊರಿನ ದ್ಯಾಮವ್ವ ತಾಯಿ, ಕುರುಬಗೇರಿಯ ಹುಲಿಗೆಮ್ಮ ತಾಯಿ ಶ್ರಾವಣಮಾಸದಲ್ಲಿ ತಮ್ಮ ವೈಭವ ಮೆರೆದು ಉಳಿದದಿನ ಮೂಲೆ ಸೇರಿದರೆ ಗುಡಿ ಓಣಿಯ ನಂದಿಮಾರಿ ಬಸವಣ್ಣ ಪ್ರತಿ ಸೋಮವಾರಕ್ಕೊಮ್ಮೆ ಎಣ್ಣೆಬತ್ತಿ ಕಂಡು ಬೆಳಕಾಗುತ್ತಿದ್ದ. ಇದರ ನಡುವೆ ಏಳು ವರ್ಷಕ್ಕೊಮ್ಮೆ ನಡೆಯುವ ಕೇರಿಯೊಳಗಿನ ದುರ್ಗವ್ವನ ಜಾತ್ರಿ ಹತ್ತೂರ ಹಬ್ಬವೇ ಸರಿ.

ಎಮ್ಮೆಲ್ಲೆ ಬಂದು ಹೋದಾಗಿನಿಂದ ಮುಖ ಕೆಂಪೇರಿಸಿಕೊಂಡೇ ಅಡ್ಡಾಡುತ್ತಿದ್ದ ಮಾದರ ಪಡಿಯಾ ಚುಟುಚುಟು ಅಂದಾಗೊಮ್ಮೆ ಕಿಸೆಗಿಳಿಸಿದ ಕೊರಚುಟ್ಟಕ್ಕೆ ಬೆಂಕಿಹೊತ್ತಿಸಿ ಎರಡ್ಮೂರು ಜರಕಿಗೆ ಜೋಲಿ ಹೊಡಿತಾ ಜಿಂದೇಸಾಬನ ಚಾದಂಗಡಿಯೊಳಗ ಕುಂತಿದ್ದ. ಜಿಂದೇಸಾಬನ ಚಾದಂಗಡಿ ಊರು-ಕೇರಿ ಏಕಬಾಕವಾಗಿ ಕೂಡುತಿದ್ದ ಪವಿತ್ರಕ್ಷೇತ್ರವೇ ಸರಿ. ಇದೇ ಕಾರಣಕ್ಕೆ ಮಡಿಮೈಲಿಗೆ ಆಚರಿಸುತ್ತಿದ್ದ ಕೆಲವರು ಇತ್ತ ಸುಳಿಯುತ್ತಲೂ ಇರಲಿಲ್ಲ. 'ಯಾಕ್ಲೇ ಪಡಿಯಾ ಹೋಗಿಲ್ಲನೂ ದಗದಕ್ಕಾ' ಎಂದು ಮಗ್ಗಲದಾಗ ಚಾ ಸುರ್sss ಅನ್ನುತ್ತಾ ದುರ್ಗವ್ವನ ಗುಡಿಪೂಜಾರಿ ಹನುಮಪ್ಪಜ್ಜ ಬಂದು ಕೂತ. ಕೆಣಕುವವರಿಗಾಗಿಯೇ ಕಾದು ಕುಳಿತಿದ್ದ ಪಡಿಯಾ ಸುರು ಹಚ್ಚಿದ. 'ಎಂಥಾ ಹಡತ್ಯಾಪಿ ಎಮ್ಮೆಲೆ ಗಂಟಬಿದ್ನಪಾ ಯಜ್ಜ ನಮಗ, ಊರವರಿಗೊಂದು ಕೇರಿಯವರಿಗೊಂದು ಮಾಡ್ಕೋತ, ಹೊಟ್ಟೆಗೆರ ಏನ್ ತಿಂತಾನಂತೀನಿ ಇವಾ, ಈ ದಿಕ್ಕೇಡಿ ಸೊ...ಮಗ ಕೇರಿಗೊಂದು ಬಿಲ್ಲಿನರಾ ತೂರಲಿಲ್ಲಲಾ ಅಂತೀನಿ. ನೀನೂ ದಿನಾ ನೋಡ್ತೀಯಲ ಮಳೀ ಬಂದ್ರ ನೆಟ್ಟಗ ಚಾಟ್ ಇಲ್ದಂಗ ತಟ್ಟೀ ಗ್ವಾಡಿ ನಡುವೆ ಎಷ್ಟು ದಿನಾಂತ ದುರಗವ್ವ ತಾಯಿ ಕೂರೋದು, ಇದ್ದ ದೈವಕ್ಕ ಬಂದ ಭಕ್ತ ದೈವಕ್ಕ ಕೂರಾಕ ನೆಳ್ ಮಾಡಬೇಕು. ಕೇರಿ ಮರ್ಯಾದೀ ಏತಿ ಇದ್ರಾಗ, ಎಮ್ಮೆಲೆ ಸಾಹೇಬ ರೊಕ್ಕ ಬಿಚ್ಚಿದ್ರ ಗುಡಿ ರಿಪೇರಿಯಾಗುತ್ತಂತ ಕಣ್ಣುಬಾಯಿ ಬಿಟ್ಕೊಂಡು ಕಾಯ್ತಿದ್ರ ದೋಖಾ ಕೊಟ್ ಹೋದ್ನಲ್ಲೋ ಆ ಕಿಸಬಾಯಿ, ಹೋದ್ವರ್ಷ ಎಮ್ಮೆಲೆ ಎಲೆಕ್ಷನದಾಗ ಊರವರಿಗಿಂತ ನೂರಿನ್ನೂರು ಕಮ್ಮೀನ ಕೇರೆನ ಮಂದೀಗೆ ರೊಕ್ಕ ಹಂಚಿಸಿದಾಗನ ತಿಳ್ಕೋಬೇಕಿತ್ತು ಇವನ್ದೇನೈತಿ ಹಕೀಕತ್ತು ಅಂತ.

ಅಲ್ಲಪಾ ಯಜ್ಜ ಇನ್ನೊಂದು ಮಾತು ಹೇಳ್ತೀನಿ ತಪ್ಪಿದ್ರ ಕಾಲನ್ನು ತಗೊಂಡು ಹೊಡದರ ಹೊಡಿ ಹಿರಿಯಾ ಅದೀ. ಈಗೇನ್ ಈ ಮಂಗ್ಯಾನಿಕೆ ಊರ ಅಗಸಿಬಾಗಲಿಗೆ ಕಮಾನು ಕಟ್ಟಿಸ್ತೀನಿ ಅಂತ ಮಾತು ಕೊಟ್ಟು ಹೋಗ್ಯಾನಷ್ಟ, ಮುಂದುವರೆದು ನಾವು ದ್ವಾರಬಾಗಲಿಗೆ ದುರ್ಗವ್ವನ ಹೆಸರಿಟ್ಟು, ಕಮಾನಿನಮ್ಯಾಗ ಹುಲಿಮ್ಯಾಗಿನ ದುರುಗವ್ವನ ಮೂರ್ತಿ ಕೂರ್ಸಾಕ ಬೇಡಿಕಿ ಇಡೋಣ ಏನಂತೀ ಇದ್ಕ' ಚುಟ್ಟಾದ ಹೊಗೆಯ ಘಾಟಿನಲ್ಲಿ ಆತನ ಮುಖಭಾವ ಮಂದಗಣ್ಣಿನ ಯಲ್ಲಪ್ಪಜ್ಜನಿಗೇನೂ ಕಾಣಲಿಲ್ಲ. ತನ್ನೊಳಗಿನ ಆಕ್ರೋಶದ ಕಿಡಿಯನ್ನು ಯಲ್ಲಪ್ಪಜ್ಜನವರೆಗೂ ವಿಸ್ತರಿಸಲು ಯತ್ನಿಸಿದ. ನಶೆ ಇಳಿದಾಗೊಮ್ಮೆ ಚಹಾ ಒಳಗಿಳಿಸುವ ಆತ ತಟತಟಗಾ ತಡದು ಚಹಾ ಜಗ್ಗ ಮನದೊಳಗೆ ಕುದಿಯುತ್ತ ಧ್ವನಿ ಹೊರಡಿಸಿದ. ಪಡಿಯಾನ ಮಾತುಗಳಿಗೆ ಸೊಪ್ಪು ಹಾಕದೇ ತಾನು ಹೇಳಬೇಕಾದುದನ್ನೇ ಹೇಳಿದ. 'ಅಲ್ಲಲೇ ಪಡಿಯಾ ನಿಮ್ಮಜ್ಜ ನಮ್ಮಜ್ಜಾರು ಹೇಳ್ತಿದ್ದ ಕಥೀ ನಿನಗೂ ನೆಪ್ಪಿರಬೋದು. ಒಂದಾನೊಂದು ಕಾಲದಾಗ ಸುತ್ತುಮ್ತಾಗಿನ ಊರಾಗೆಲ್ಲ ಪ್ಲೇಗ್ ಬಂದು ಮಂದೆಲ್ಲ ನೆಳ್ಯಾಡ್ತಿರ್ಬೇಕಾದ್ರ ಸಾಕ್ಷಾತ್ ದುರ್ಗವ್ವನ ನಮ್ಮಪ್ಪನ ಮೈಮ್ಯಾಗ ಬಂದು ನಾಕುಕಾಲಿನ ಬ್ಯಾಟಿ ಕೇಳಿದ್ಲಂತ. ಕೇಳಿದ್ದು ಕೊಟ್ ಮ್ಯಾಲೀನ ದಿನಕ್ಕೊಂದು ಹೆಣ ಬೀಳೋದು ಕಡಿಮ್ಯಾಗಿ ಊರಿಗೂರ ಸ್ವಚ್ಛ್ಯಾಗ ಅಳದು ಹೋಗೋದನ್ನ ಕಾಪಾಡಿದ ಗಟವಾಣಿಗಿತ್ಯಕಿ. ಅವತ್ತಿನಿಂದ ಸುತ್ತಲ ಹತ್ತೂರುಮಂದಿ ಅಕೀ ಪಾದಕ್ಕ ಬಿದ್ದೋರು ಇವತ್ತಿಗೂ ಬಿಟ್ಟಿಲ್ಲ. ನೋಡಿಯಿಲ್ಲ ಹೋದ್ವರ್ಷದ ಜಾತ್ರ್ಯಾಗ ನಿಲ್ಲಾಕ ಜಗಾ ಇಲ್ದಂಗ ಕೇರಿ ತುಂಬಿ ತುಳಕ್ತಿತ್ತು. ಕಿಲಾರಿಬಂಡಿ ಕಟ್ಕೊಂಡು ಹುರುಪೀಲೆ ಬರೋ ಪರವೂರು ಮಂದೀಗೆ ವಾರಗಂಟ್ಲೇ ಊಟಾನೀರು ಕೊಡೋದ್ ಹೇಳು,